ಉಚಿತ ವೈದ್ಯಕೀಯ ಚಿಕಿತ್ಸೆ ನೀಡುವುದು ಮತ್ತು ಕಾಮಗಾರಿಯ ಕಾರಣದಿಂದ ಕಾರ್ಮಿಕರು ಶಾಶ್ವತವಾಗಿ ಅಂಗವಿಕಲರಾದರೆ ಅಥವಾ ಮೃತಪಟ್ಟರೆ ಸಂದರ್ಭಕ್ಕೆ ತಕ್ಕಂತೆ ಅವರಿಗೆ ಅಥವಾ ಅವರ ವಾರಸುದಾರರಿಗೆ ರೂ. 25,000/- ಗಳನ್ನು ಅನುಗ್ರಹ ಧನವಾಗಿ ನೀಡುವ ಈ ಸೌಲಭ್ಯಗಳನ್ನು ಅಧಿನಿಯಮದಡಿ ಕಲ್ಪಿಸಿರುತ್ತದೆ.

(ಆ) ಇಲ್ಲ.

(ಇ) ಉದ್ಭವಿಸುವುದಿಲ್ಲ.

(ಈ) ಬಡತನ ರೇಖೆಗಿಂತ ಕೆಳಮಟ್ಟದಲ್ಲಿರುವ ಕೂಲಿ ಕಾರ್ಮಿಕರ ಕುಟುಂಬಗಳಿಗೆ ರಾಷ್ಟ್ರೀಯ ಸ್ವಾಸ್ಥ್ಯ ಭೀಮಾ ಯೋಜನೆಯ ಆರೋಗ್ಯ ವಿಮೆಯನ್ನು ಕಾರ್ಮಿಕ ಇಲಾಖೆ ಮತು ಗ್ರಾಮೀಣ ಭೂರಹಿತ ಕುಟುಂಬಗಳ ಕಾರ್ಮಿಕರಿಗೆ ಅಮ್ ಆದ್ಮಿ ಭೀಮಾ ಯೋಜನೆಯಡಿ ಸಾಮಾನ್ಯ ವಿಮೆಯನ್ನು ಕಂದಾಯ ಇಲಾಖೆಯಡಿ ಅನುಷ್ಠಾನಗೊಳಿಸಲಾಗುತ್ತಿದೆ. ಕೇಂದ್ರ ಸರ್ಕಾರದ ನಿರ್ದೇಶನದಂತೆ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ನೋಂದಾಯಿತ ಎಲ್ಲಾ ವರ್ಗದ ಕೂಲಿ ಕಾರ್ಮಿಕರ ಕುಟುಂಬಗಳಿಗೆ ರಾಷ್ಟ್ರೀಯ ಸ್ವಾಸ್ಥ್ಯ ಭೀಮಾ ಯೋಜನೆಯ ಆರೋಗ್ಯ ವಿಮೆಯನ್ನು ವಿಸ್ತರಿಸಲು ರಾಜ್ಯ ಸರ್ಕಾರವು ಸೂಕ್ತ ಕ್ರಮ ಜರುಗಿಸಲಾಗುತ್ತಿದೆ.

(ಉ) ಉದ್ಭವಿಸುವುದಿಲ್ಲ.

ಎನ್.ಆರ್.ಇ.ಜಿ. ಯೋಜನೆ ಅನುಷ್ಠಾನ

416 (95) ಡಾ:ಬಗಲಿ ಸಾರ್ವಭೌಮ ಸಾತಗೌಡ (ಇಂಡಿ) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

(ಅ) ಇಂಡಿ ತಾಲ್ಲೂಕಿನ ನಂದರಗಿ ಗ್ರಾಮ ಪಂಚಾಯತ್‌ನ ವ್ಯಾಪ್ತಿಯಲ್ಲಿ ಎನ್.ಆರ್.ಇ.ಜಿ.ಎಸ್. ಯೋಜನೆ ಅನುಷ್ಠಾನದಲ್ಲಿ ನಡೆದ ಭ್ರಷ್ಟಾಚಾರ ಸರ್ಕಾರದ ಗಮಮನಕ್ಕೆ ಬಂದಿದೆಯೇ:

(ಆ) ಈ ಹಣ ದುರುಪಯೋಗದ ತನಿಖೆಗೆ ನಿಯೋಜಕರಾದ ಮುಖ್ಯ ಯೋಜನಾಧಿಕಾರಿಗಳು, ಜಿಲ್ಲಾ ಪಂಚಾಯತ್, ಬಿಜಾಪುರ ಇವರು ಸಕಾರಣವಿಲ್ಲದೆ ವಿಚಾರಣೆಯನ್ನು ಸಾವಧಾನವಾಗಿ ನಡೆಸುತ್ತಾ ಮತ್ತು ಮುಂದೂಡುತ್ತಾ ಆಪಾದಿತರಿಗೆ ರಕ್ಷಣೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದರೆ ಮುಖ್ಯ ಯೋಜನಾಧಿಕಾರಿಗಳ ಮೇಲೆ ಸರ್ಕಾರ ಯಾವ ಕ್ರಮ ಜರುಗಿಸುತ್ತದೆ;

(ಇ) ಈ ವಿಚಾರಣೆಯನ್ನು ಪೂರ್ಣಗೊಳಿಸಲು ಸರ್ಕಾರಕ್ಕೆ ಎಷ್ಟು ಅವಧಿ ಬೇಕು (ಒಂದು ವೇಳೆ ವಿಚಾರಣೆ ಪೂರ್ಣಗೊಂಡಿದ್ದರೆ, ವಿಚಾರಣಾ ವರದಿಯ ಪ್ರತಿಯನ್ನು ನೀಡುವುದು)?

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–

(ಅ) ಸರ್ಕಾರದ ಗಮನಕ್ಕೆ ಬಂದಿರುತ್ತದೆ.

(ಆ) ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ನಂದರಗಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದಲ್ಲಿ ಕಂಡು ಬಂದ ಲೋಪದೋಷಗಳ ಬಗ್ಗೆ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಿಜಾಪುರ ಇವರು ಜಿಲ್ಲಾ ಪಂಚಾಯತಿಯಲ್ಲಿ ಕಾರ್ಯನಿರ್ವಹಿಸುವ ಮುಖ್ಯ ಯೋಜನಾಧಿಕಾರಿಗಳನ್ನು ವಿಚಾರಣಾ ಅಧಿಕಾರಿಯಾಗಿ ನೇಮಕ ಮಾಡಿದ್ದು ಅದರಂತೆಯೇ, ನಂದರಗಿ ಗ್ರಾಮ ಪಂಚಾಯತಿಯ ವಿಚಾರಣಾ ವರದಿಯನ್ನು ದಿನಾಂಕ: 17–6–2010 ರಂದು ಜಿಲ್ಲಾ ಪಂಚಾಯತಿಗೆ, ಮುಖ್ಯ ಯೋಜನಾಧಿಕಾರಿಗಳು ಸಲ್ಲಿಸಿರುತ್ತಾರೆ ಮತ್ತು ಸದರಿ ವರದಿ ಆಧಾರದ ಮೇಲೆ ಶ್ರೀ. ಎಸ್.ಜಿ.ಕಳಾವಂತ, ನಂದರಗಿ ಗ್ರಾಮ ಪಂಚಾಯತಿಯ ಕಾರ್ಯದರ್ಶಿ ಮತ್ತು ಶ್ರೀ. ಬಿ.ಸಿ. ಬಬಲಾದ, ಸಹಾಯಕ ಕೃಷಿ ಅಧಿಕಾರಿ, ಜಲಾನಯನ ಅಭಿವೃದ್ಧಿ ಇಲಾಖೆ, ಇಂಡಿ ಇವರುಗಳ ಮೇಲೆ ಈಗಾಗಲೇ ಶಿಸ್ತು ಕ್ರಮ ಜರುಗಿಸಿ ಸೇವೆಯಿಂದ ಅಮಾನತ್ತುಗೊಳಿಸಿದೆ. ಮುಖ್ಯ ಯೋಜನಾಧಿಕಾರಿಗಳು ಚುನಾವಣೆ ಮತ್ತು ಕ್ರಿಯಾಯೋಜನೆ ತಯಾರಿಕೆ ಕೆಲಸದಲ್ಲಿ ತೊಡಗಿದ್ದರಿಂದ ತನಿಖಾ ವರದಿ ಸಲ್ಲಿಸುವಲ್ಲಿ ವಿಳಂಬವಾಗಿರುತ್ತದೆ ಎಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ವರದಿ ಮಾಡಿರುತ್ತಾರೆ. ಆದ್ದರಿಂದ, ಇವರ ಮೇಲೆ ಕ್ರಮ ಜರುಗಿಸಲು ಉದ್ದೇಶಿಸಿರುವುದಿಲ್ಲ.

(ಇ) ಈಗಾಗಲೇ ವಿಚಾರಣಾ ವರದಿಯನ್ನು ಸಲ್ಲಿಸಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ. ವಿಚಾರಣಾ ವರದಿಯ ಪ್ರತಿಯನ್ನು ಲಗತ್ತಿಸಿದೆ.

ಜಿಲ್ಲಾ ಪಂಚಾಯತ್, ವಿಜಾಪೂರ

ಕ್ರ:ಜಿಪಂಆ/ಉಖಾಯೋಪ/ಸಿಆರ್–15/2010–11 ದಿನಾಂಕ 17–06–2010

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತ್,
ವಿಜಾಪೂರ ಇವರಿಗೆ–

ಮಾನ್ಯರೆ,

ವಿಷಯ:– 2009–10ನೇ ಸಾಲಿನ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದಲ್ಲಾದ ಅವ್ಯವಹಾರದ ಬಗ್ಗೆ ತನಿಖೆ ಮಾಡಿ ವರದಿ ಸಲ್ಲಿಸುವ ಕುರಿತು.

ಉಲ್ಲೇಖ:– ತಮ್ಮ ಪತ್ರ ಸಂಖ್ಯೆ. ಜಿಪಂಆ/ಉಖಾಯೋ/ಸಿಆರ್–15/2009–10 ದಿನಾಂಕ 15–04–2010

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ ತಾವು ನಿರ್ದೇಶಿಸಿದ ಪ್ರಕಾರ ನಾನು ನನಗೆ ಒದಗಿಸಿದ ಸಿಬ್ಬಂದಿಯೊಂದಿಗೆ ಇಂಡಿ ತಾಲ್ಲೂಕಿನ ನಂದರಗಿ ಗ್ರಾಮ ಪಂಚಾಯತಿಗೆ ಭೇಟಿ ನೀಡಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದ ದಾಖಲೆಗಳನ್ನು ವಿವರವಾಗಿ ಪರಿಶೀಲಿಸಲಾಯಿತು.

2009–10ನೇ ಸಾಲಿನಲ್ಲಿ ಈ ಯೋಜನೆಯಡಿ ನಂದರಗಿ ಗ್ರಾಮ ಪಂಚಾಯತಿಗೆ ಒಟ್ಟು ರೂ. 121.00 ಲಕ್ಷ ಅನುದಾನ ಸ್ವೀಕೃತವಾಗಿದ್ದು ಬ್ಯಾಂಕ್ ಬಡ್ಡಿ ಹಾಗೂ ಆರಂಭದ ಶಿಲ್ಕು ಸೇರಿ ಒಟ್ಟು ಅನುದಾನ ರೂ. 122.001 ಲಕ್ಷ ಲಭ್ಯವಾಗಿದೆ. ಸದರಿ ಗ್ರಾಮ ಪಂಚಾಯತಿಯು ವಿಜಯ ಬ್ಯಾಂಕ್ ಬಳ್ಳೊಳ್ಳಿಯಲ್ಲಿ ಉಳಿತಾಯ ಖಾತೆ ಸಂಖ್ಯೆ. 7441 ಹೊಂದಿರುತ್ತದೆ. 2009–10ನೇ ಸಾಲಿನಲ್ಲಿ ಒಟ್ಟು ರೂ. 1,03,41,897–00ಗಳನ್ನು ಖರ್ಚು ಮಾಡಲಾಗಿದೆ.

ತಪಾಸಣೆ ಸಮಯದಲ್ಲಿ ಕಾರ್ಯದರ್ಶಿ, ಗ್ರಾಮ ಪಂಚಾಯತ, ನಂದರಗಿ ಇವರು ಸದರ ಯೋಜನೆಯ ಅನುಷ್ಠಾನಕ್ಕೆ ನಿರ್ವಹಿಸಲಾದ ಒಟ್ಟು 170 ಕಡತಗಳನ್ನು ತನಿಖೆಗಾಗಿ ಹಾಜರ್‌ಪಡಿಸಿರುತ್ತಾರೆ. ಕಡತಗಳನ್ನು ಪರಿಶೀಲಿಸಲಾಗಿ ಪ್ರತಿಯೊಂದು

ಕಾಮಗಾರಿಗಳಿಗೆ ಪ್ರತ್ಯೇಕವಾಗಿ ಕಡತಗಳನ್ನು ನಿರ್ವಹಿಸಿರುತ್ತಾರೆ. ಅನುಷ್ಠಾನಗೊಳಿಸಲಾದ ಕಾಮಗಾರಿಗಳ ವಿವರವಾದ ಮಾಹಿತಿಯ ತಃಖ್ತೆ ಅನುಭಂಧ–1ನ್ನು ಮಾಹಿತಿಗಾಗಿ ಲಗತ್ತಿಸಿದೆ. ಪರಿಶೀಲನೆ ಕಾಲಕ್ಕೆ ಈ ಕೆಳಕಾಣಿಸಿದ ಲೋಪ–ದೋಷಗಳು ಕಂಡುಬಂದಿವೆ.

(1) ಕಾಮಗಾರಿಗಳಿಗೆ ಕಾಮಗಾರಿ ಆದೇಶ ನೀಡಿದ ಬಗ್ಗೆ ದಾಖಲಾತಿ ಇಟ್ಟಿರುವುದಿಲ್ಲ.

(2) ಕೆಲವು ಕಾಮಗಾರಿಗಳ ಮೂರು ಹಂತದ ಫೋಟೋಗಳನ್ನು ನಿರ್ವಹಿಸಿರುವುದಿಲ್ಲ.

(3) ಕಾಮಗಾರಿ ಪೂರ್ಣಗೊಂಡ ಬಗ್ಗೆ ಪ್ರಮಾಣ ಪತ್ರ ಇಟ್ಟಿರುವುದಿಲ್ಲ.

ಅದರಂತೆ ನಿರ್ವಹಿಸಲಾದ ರಿಜಿಸ್ಟರ್‌ಗಳನ್ನು ಪರಿಶೀಲಿಸಲಾಗಿ ನಮೂನೆ–3 ರಲ್ಲಿ ಉದ್ಯೋಗಾಕಾಂಕ್ಷಿಗಳ ಭಾವಚಿತ್ರಗಳನ್ನು ಹಚ್ಚಿರುವುದಿಲ್ಲ. ನಮೂನೆ–5ರ ವಹಿಯಲ್ಲಿ ಗುಂದವಾನ ಗ್ರಾಮ ಹೊರತುಪಡಿಸಿ ಇನ್ನುಳಿದ ಗ್ರಾಮಗಳ ಕೂಲಿಕಾರರ ಕುಟುಂಬಗಳಿಗೆ ಉದ್ಯೋಗ ಚೀಟಿ ವಿತರಿಸಿದ ಬಗ್ಗೆ ರಿಜಿಸ್ಟರ್‌ದಲ್ಲಿ ಬರೆದಿರುವುದಿಲ್ಲ. ಮತ್ತು ಅನೇಕ ಕುಟುಂಬಗಳಿಗೆ ಉದ್ಯೋಗ ಚೀಟಿ ವಿತರಿಸಿದ ಬಗ್ಗೆ ಅವರ ಸಹಿ ಪಡೆದಿರುವುದಿಲ್ಲ. ನಮೂನೆ–2,7,10 ಹಾಗೂ 11ರ ರಿಜಿಸ್ಟರ್‌ಗಳು ಅಪೂರ್ಣವಾಗಿರುತ್ತವೆ.

ವಿಜಯಾ ಬ್ಯಾಂಕ್, ಬಳ್ಳೊಳಿಗೆ ಭೇಟಿ ನೀಡಿ ಬ್ಯಾಂಕಿನಿಂದ ನಂದರಗಿ ಗ್ರಾಮ ಪಂಚಾಯತಿಯಿಂದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ದಿನಾಂಕ 01–04–2009 ರಿಂದ 31–03–2010ರವರೆಗೆ ಮಾಡಲಾದ ವೆಚ್ಚದ ಮಾಹಿತಿಯನ್ನು (ಬ್ಯಾಂಕ್ ತಃಖ್ತೆ) ಹಾಗೂ ಗ್ರಾಮ ಪಂಚಾಯತಿಯಿಂದ ನೀಡಿದ ಪೇ ಅಡ್ವೈಜರ್ ಪ್ರತಿಗಳನ್ನು ಪಡೆದು ಅವುಗಳನ್ನು ಪರಿಶೀಲಿಸಲಾಗಿ ಕೂಲಿಕಾರರ ಕೂಲಿ ಹಣವನ್ನು ಅವರವರ ಬ್ಯಾಂಕ್ ಉಳಿತಾಯ ಖಾತೆಗಳಿಗೆ ಜಮಾ ಮಾಡಿದ್ದು ಕಂಡುಬಂದಿದೆ. ಈ ಕುರಿತು ಬ್ಯಾಂಕಿನಿಂದ ಪಡೆದ ಬ್ಯಾಂಕ್ ತಃಖ್ತೆ ಹಾಗೂ ಗ್ರಾಮ ಪಂಚಾಯತಿಯಿಂದ ನೀಡಲಾದ ಪೇ ಅಡ್ವೈಜರ್ ಪ್ರತಿಗಳನ್ನು ಮಾಹಿತಿಗಾಗಿ ಲಗತ್ತಿಸಿದೆ.

ಅನುಷ್ಠಾನಗೊಂಡ ಒಟ್ಟು 170 ಕಾಮಗಾರಿಗಳ ಪೈಕಿ ರ್‍ಯಾಂಡಮ್ ಆಗಿ 11 ಕಾಮಗಾರಿಗಳನ್ನು ಭೌತಿಕವಾಗಿ ಸ್ಥಳ ಪರಿಶೀಲನೆ ಕೈಗೊಳ್ಳಲಾಗಿದೆ. ಅದರ ವಿವರ ಕೆಳಗಿನಂತಿದೆ.

(1) ಶ್ರೀಮತಿ ಕವಿತಾ ಕೃಷ್ಣಾ ಇಲ್ಲಾಳ ಸಾ|| ಕಪನಿಂಬರಗಿ ಸ.ನಂ. 91/2 ಬಿ ರಲ್ಲಿ 5–00 ಎಕರೆ ಜಮೀನಿನಲ್ಲಿ ದ್ರಾಕ್ಷಿ ಸಸಿ ನೆಡಲಾಗಿದೆ. ಕಾಮಗಾರಿ ಪೂರ್ಣಗೊಂಡಿದೆ.

(2) ಶ್ರೀ ವಾಮನ ನಾರಾಯಣ ಮಹಿಷಿ ಸಾ|| ಕಪನಿಂಬರಗಿ ಸ.ನಂ. 14/3 ರಲ್ಲಿ 5–00 ಎಕರೆ ಜಮೀನಿನಲ್ಲಿ ದ್ರಾಕ್ಷಿ ಸಸಿ ನೆಡಲಾಗಿದೆ. ಕಾಮಗಾರಿ ಪೂರ್ಣಗೊಂಡಿದೆ.

(3) ಶ್ರೀ ನಾರಾಯಣ ಕೇಶವ ಮಹಿಷಿ ಸಾ|| ಕಪನಿಂಬರಗಿ ಸ.ನಂ. 552/ಎ/ 2ಎ ರಲ್ಲಿ 5–00 ಎಕರೆ ಜಮೀನಿನಲ್ಲಿ ದ್ರಾಕ್ಷಿ ಸಸಿ ನೆಡಲಾಗಿದೆ. ಕಾಮಗಾರಿ ಪೂರ್ಣಗೊಂಡಿದೆ.

(4) ಶ್ರೀಮತಿ ಸೋನಾಬಾಯಿ ಗೌಡಪ್ಪ ಸಿನ್ನೂರ ಸಾ|| ಕಪನಿಂಬರಗಿ ಸ.ನಂ.111/ 1 ರಲ್ಲಿ 5–00 ಎಕರೆ ಜಮೀನಿನಲ್ಲಿ ದ್ರಾಕ್ಷಿ ಸಸಿ ನೆಡಲಾಗಿದೆ. ಕಾಮಗಾರಿ ಪೂರ್ಣಗೊಂಡಿದೆ.

(5) ಶ್ರೀ ಸೋಮನಿಂಗ ಗೌಡಪ್ಪ ಸಿನ್ನೂರ ಸಾ|| ಕಪನಿಂಬರಗಿ ಸ.ನಂ 65ರಲ್ಲಿ 4–00 ಎಕರೆ ಜಮೀನಿನಲ್ಲಿ ಎರೆಹುಳ ತೊಟ್ಟಿ ಕಾಮಗಾರಿ ನಿರ್ವಹಿಸಿದ್ದಾರೆ. ಕಾಮಗಾರಿ ಪೂರ್ಣಗೊಂಡಿದೆ.

(6) ಶ್ರೀ ಶ್ರೀಶೈಲ ಮಾದೇವ ಬಿರಾದಾರ ಸಾ ಶಿಗಣಾಪೂರ ಸ.ನಂ. 164/ 2 ರಲ್ಲಿ ಕೃಷಿ ಹೊಂಡ ನಿರ್ಮಾಣವಾಗಿದೆ. ಕಾಮಗಾರಿ ಪೂರ್ಣಗೊಂಡಿದೆ.

(7) ಶ್ರೀ ಮಲ್ಲಪ್ಪ ಬಸಪ್ಪ ಬಿರಾದಾರ ಸಾ|| ಶಿಗಣಾಪೂರ ಸ.ನಂ. 169/1 ರಲ್ಲಿ ಕೃಷಿ ಹೊಂಡ ನಿರ್ಮಾಣ ಮಾಡಲಾಗಿದ್ದು ಕಾಮಗಾರಿ ಪೂರ್ಣಗೊಂಡಿದೆ.

(8) ಶ್ರೀ ಶೆಟ್ಟಪ್ಪ ವಿಠೋಬ ನಾಟಕಾರ ಸಾ|| ಶಿಗಣಾಪೂರ ಸ.ನಂ. 157 ರಲ್ಲಿ ಎಂ.ಪಿ.ಟಿ ನಿರ್ಮಾಣ ಮಾಡಲಾಗಿದೆ. ಕಾಮಗಾರಿ ಪೂರ್ಣಗೊಂಡಿದೆ.

(9) ಶ್ರೀ ಹುಸನಪ್ಪ ನಾಟಕಾರ ಸಾ|| ಶಿಗಣಾಪೂರ ಇವರ ಜಮೀನಿನಲ್ಲಿ ನಾಲಾ ಬದು ನಿರ್ಮಾಣ ಮಾಡಲಾಗಿದೆ. ಕಾಮಗಾರಿ ಪೂರ್ಣಗೊಂಡಿದೆ.

(10) ಗುಂದವಾನ ಕೂಡಗಿ ರಸ್ತೆಗೆ ರೂ. 1.52 ಲಕ್ಷ ಅನುದಾನ ಖರ್ಚು ಭರಿಸಿದ್ದು, ಕಾಮಗಾರಿ ಪೂರ್ಣಗೊಂಡಿದೆ.

(11) ಗುಂದವಾನ ಗ್ರಾಮದ ಹತ್ತಿರವಿರುವ ಹಳ್ಳಕ್ಕೆ (1) ಭೀಮರಾಯ ಚವ್ಹಾಣ ಹಾಗೂ (2) ಶ್ರೀ ಶಂಕರ ಇಳಗೇರಿ ಇವರ ಜಮೀನಿನ ಹತ್ತಿರ ಹಳ್ಳದ ಹೂಳು ತೆಗೆಯಲಾಗಿದೆ. ಕಾಮಗಾರಿ ಪೂರ್ಣಗೊಂಡಿದೆ.

ಮೇಲಿನ ಕಾಮಗಾರಿಗಳನ್ನು ಸ್ಥಳ ಪರಿಶೀಲನೆ ಮಾಡಿದ ಬಗ್ಗೆ ಕಾಮಗಾರಿಗಳ ಛಾಯಾಪ್ರತಿಗಳನ್ನು ಅವಗಾಹನೆಗಾಗಿ ಲಗತ್ತಿಸಿದೆ. ಸ್ಥಳ ಪರಿಶೀಲನೆ ಮಾಡಿದ ಕಾಮಗಾರಿಗಳು ತೃಪ್ತಿಕರವಾಗಿವೆ.

ಅಭಿಪ್ರಾಯ:

1. ಕಡತಗಳ ಬ್ಯಾಂಕ್ ತಃಖ್ತೆ ವ ಪೇ ಅಡ್ವೈಜರ್ ಎಲ್ಲ ದಾಖಲೆಗಳನ್ನು ಪರಿಶೀಲಿಸಲಾಗಿ ಕೂಲಿಕಾರರ ಕೂಲಿ ಹಣ ಅವರವರ ಬ್ಯಾಂಕ್ ಉಳಿತಾಯ ಖಾತೆಗಳಿಗೆ ಜಮೆ ಆಗಿರುವುದು ಕಂಡು ಬಂದಿದೆ.

2. ಕಾಮಗಾರಿಗಳ ಭೌತಿಕ ಸ್ಥಳ ಪರಿಶೀಲನೆಯಿಂದ ಅನುಷ್ಠಾನಗೊಂಡ ಕಾಮಗಾರಿಗಳು ತೃಪ್ತಿಕರವಾಗಿವೆ. ನಾವು ಪರಿಶೀಲಿಸಿದ ಕಾಮಗಾರಿಗಳ ಪೈಕಿ ಜಲಾಯನ ಇಲಾಖೆಯ ಕಾಮಗಾರಿಗಳು ಮಾತ್ರ ಯಂತ್ರಗಳ ಮುಖಾಂತರ ಮಾಡಿಸಿದ್ದು, ಇಲ್ಲಿ ಎನ್.ಆರ್.ಇ.ಜಿ.ಎ. ಮಾರ್ಗಸೂಚಿ ಉಲ್ಲಂಘನೆಯಾಗಿದ್ದು ಕಂಡು ಬಂದಿದೆ. ಇದಕ್ಕೆ ಜಲಾನಯನ ಇಲಾಖೆಯ ಶ್ರೀ. ಬಿ.ಸಿ.ಬಬಲಾದಿ, ಸಹಾಯಕ ಕೃಷಿ ಅಧಿಕಾರಿ ಹಾಗೂ ಶೀ ಕಳಾವಂತ, ಕಾರ್ಯದರ್ಶಿ ಗ್ರಾಮ ಪಂಚಾಯತ್, ನಂದರಗಿ ಇವರ ಮೇಲೆ ಕ್ರಮ ಜರುಗಿಸಬಹುದಾಗಿದೆ.

ಲಗತ್ತುಗಳು: 1) ಅನುಬಂಧ–1–22 ಪುಟಗಳು

2) ಬ್ಯಾಂಕ್ ತಃಖ್ತೆ–7 ಪುಟಗಳು

3) ಪೇ ಅಡ್ವೈಜರ್ ಪ್ರತಿಗಳು–96 ಪುಟಗಳು

4) ಫೋಟೋಗಳು–12

ತಮ್ಮ ವಿಶ್ವಾಸಿಕ,

ಮುಖ್ಯ ಯೋಜನಾಧಿಕಾರಿಗಳು

ಜಿಲ್ಲಾ ಪಂಚಾಯತ್, ವಿಜಾಪುರ